## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** COVID-19, ಕೊರೊನ ವೈರಸ್ ಖಾಯಿಲೆಯ ನಿರ್ಮೂಲನೆಗಾಗಿ ಸಮಸ್ತ ರಾಜ್ಯ ಸರ್ಕಾರಿ ನೌಕರರ 2020 ರ ಮಾರ್ಚ್ ತಿಂಗಳ ವೇತನದಲ್ಲಿ, ಒಂದು ದಿನದ ಸಂಬಳವನ್ನು ಕಟಾವು ಮಾಡಿ ಮುಖ್ಯ ಮಂತ್ರಿಗಳ ಪರಿಹಾರ ನಿಧಿಗೆ ಜಮಾ ಮಾಡುವ ಬಗ್ಗೆ.

**ಪ್ರಸ್ತಾವನೆ:**

ಪ್ರಸ್ತುತ ಪ್ರಪಂಚದಾದ್ಯಂತ ಹರಡುತ್ತಿರುವ COVID-19 ಅಂದರೆ, ಕರೊನ ವೈರಸ್ ಸೋಂಕು ರೋಗವು ಭಾರತದಲ್ಲಿಯೂ ಕಾಣಿಸಿಕೊಂಡಿರುತ್ತದೆ. ಭಾರತದ ಮಾನ್ಯ ಪ್ರಧಾನ ಮಂತ್ರಿಗಳು COVID-19 ರೋಗವನ್ನು ಒಂದು ರಾಷ್ಟ್ರೀಯ ವಿಪತ್ತು ಎಂದು ಘೋಷಿಸಿರುವ ಕಾರಣ ರಾಜ್ಯದಲ್ಲಿ ಈ ರೋಗವು ಹರಡದಂತೆ ತಡೆಯಲು ರಾಜ್ಯ ಸರ್ಕಾರವು ಕೈಗೊಂಡಿರುವ ಕಾರ್ಯಕ್ರಮಗಳಿಗೆ ನೆರವಾಗಲು ರಾಜ್ಯ ಸರ್ಕಾರಿ ನೌಕರರ ಮಾರ್ಚ್ ಅಥವಾ ಏಪ್ರಿಲ್ ತಿಂಗಳ ವೇತನದಲ್ಲಿ ಒಂದು ದಿನದ ವೇತನವನ್ನು ಕಟಾವು ಮಾಡಿ ಮುಖ್ಯ ಮಂತ್ರಿಗಳ ಪರಿಹಾರ ನಿಧಿಗೆ ಸಮರ್ಪಿಸಲು ಸರ್ಕಾರಿ ನೌಕರರು ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಿರುವುದರಿಂದ ಈ ಕುರಿತು ಸೂಕ್ತ ಆದೇಶವನ್ನು ಹೊರಡಿಸಬೇಕೆಂದು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘವು ಸರ್ಕಾರಕ್ಕೆ ಮನವಿ ಸಲ್ಲಿಸಿರುತ್ತದೆ.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ದಿನಾಂಕ: 26.03.2020ರ ಮನವಿಯನ್ನು ಪರಿಶೀಲಿಸಲಾಯಿತು. COVID-19 ರೋಗವನ್ನು ತಡೆಗಟ್ಟಲು ಸರ್ಕಾರಕ್ಕೆ ಸಹಾಯ ಮಾಡುವಂತೆ ಭಾರತದ ಮಾನ್ಯ ಪ್ರಧಾನ ಮಂತ್ರಿಗಳು ಕೋರಿರುವ ಹಿನ್ನೆಲೆಯಲ್ಲಿ, ಕೊರೊನಾ ವೈರಸ್ ಸೋಂಕು ರೋಗವು ರಾಜ್ಯದಲ್ಲಿ ಹರಡುವುದನ್ನು ತಡೆಗಟ್ಟುವ ರಾಜ್ಯ ಸರ್ಕಾರದ ಕಾರ್ಯಕ್ರಮ/ಯೋಜನೆಗಳಿಗೆ ನೆರವಾಗಲು ರಾಜ್ಯಾದ್ಯಂತ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ಇಲಾಖೆಗಳ ಹಾಗೂ ಎಲ್ಲಾ ವೃಂದದ ಸಮಸ್ತ ರಾಜ್ಯ ಸರ್ಕಾರಿ ನೌಕರರ ಒಂದು ದಿನದ ವೇತನವನ್ನು ಸರ್ಕಾರಕ್ಕೆ ನೀಡಲು ಎಲ್ಲಾ ಜಿಲ್ಲಾ ಮತ್ತು ಕೇಂದ್ರ ಕಾರ್ಯಕಾರಿ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಗಿದ್ದು, ಈ ಬಗ್ಗೆ ಸೂಕ್ತ ಆದೇಶವನ್ನು ಹೊರಡಿಸುವಂತೆ ಸರ್ಕಾರವನ್ನು ಕೋರಲಾಗಿರುತ್ತದೆ.

ರಾಜ್ಯದಲ್ಲಿ ಕೊರೊನ ಸೋಂಕು ರೋಗ ತಡೆಗಟ್ಟುವ ಉದ್ದೇಶಕ್ಕೆ ದೇಣಿಗೆ ನೀಡಲು ಸ್ವಯಂಪ್ರೇರಿತವಾಗಿ ಮುಂದಾಗಿರುವ ರಾಜ್ಯ ಸರ್ಕಾರಿ ನೌಕರರ ಸಂಘದ ಸದುದ್ದೇಶದ ತೀರ್ಮಾನವನ್ನು ಸರ್ಕಾರವು ಶ್ಲಾಘಿಸುತ್ತದೆ. ನೌಕರರ ಸಂಘದ ಕೋರಿಕೆಯಂತೆ ಸರ್ಕಾರವು ಈ ಕೆಳಗಿನಂತೆ ಆದೇಶ ಹೊರಡಿಸುತ್ತದೆ.

**ಸರ್ಕಾರಿ ಆದೇಶ ಸಂಖ್ಯೆ:ಆಇ 08 ಎಸ್‌ಆರ್‌ಪಿ 2020,**
**ಬೆಂಗಳೂರು, ದಿನಾಂಕ: 01ನೇ ಏಪ್ರಿಲ್ 2020.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಹರಡುತ್ತಿರುವ ಕೊರೊನಾ ವೈರಸ್ ಸೋಂಕು ರೋಗವನ್ನು ನಿಯಂತ್ರಿಸಲು ರಾಜ್ಯ ಸರ್ಕಾರವು ಕೈಗೊಂಡ ಕ್ರಮಗಳಿಗೆ ನೆರವಾಗಲು ಸರ್ಕಾರಿ ನೌಕರರ 2020ರ ಮಾರ್ಚ್ ತಿಂಗಳ ವೇತನದಲ್ಲಿ ಒಂದು ದಿನದ ಸಂಬಳವನ್ನು ಕಟಾವು ಮಾಡಿ

**ಮುಖ್ಯಮಂತ್ರಿಗಳ ಪರಿಹಾರನಿಧಿ ಕೋವಿಡ್-19 ಖಾತೆಗೆ** ನೀಡಲು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಸರ್ಕಾರವು ಮಂಜೂರಾತಿ ನೀಡಿದೆ:-

(ಅ) ನೌಕರರ ಒಂದು ದಿನದ ಸಂಬಳದ ಕೊಡುಗೆಯನ್ನು (ಒಟ್ಟು ಮೊತ್ತವನ್ನು ರೂಪಾಯಿಗೆ ಸಮನಾಗಿಸಿ ಭಿನ್ನಾಂಶವನ್ನು ನಿರ್ಲಕ್ಷಿಸುವುದು) 2020ರ ಮಾರ್ಚ್ ತಿಂಗಳಿನ ಸಂಬಳದ ಬಿಲ್‌ನಿಂದ ಕಟಾವು ಮಾಡುವ ಮೂಲಕ ಸರ್ಕಾರಕ್ಕೆ ಜಮೆ ಮಾಡುವ ಅಧಿಕಾರವನ್ನು ಸಂಬಂಧಿಸಿದ ವೇತನ ಬಟವಾಡೆ ಮಾಡುವ ಅಧಿಕಾರಿಗಳು ಮತ್ತು ಖಜಾನೆ ಅಧಿಕಾರಿಗಳು ಪಡೆದಿರುತ್ತಾರೆ.

(ಆ) ಒಂದು ದಿನದ ಸಂಬಳವನ್ನು **ಮುಖ್ಯಮಂತ್ರಿಗಳ ಪರಿಹಾರನಿಧಿ ಕೋವಿಡ್-19 ಖಾತೆಗೆ** ನೀಡಲು ಇಚ್ಛಿಸದ ನೌಕರರು ಸಂಬಂಧಪಟ್ಟ ವೇತನ ಬಟವಾಡೆ ಅಧಿಕಾರಿಗಳಿಗೆ ಈ ಬಗ್ಗೆ **ದಿನಾಂಕ: 04.04.2020ರ** ಒಳಗೆ ಲಿಖಿತ ಅಭಿಮತವನ್ನು ಸಲ್ಲಿಸತಕ್ಕದ್ದು. ಒಂದು ವೇಳೆ ನೌಕರರಿಂದ ಲಿಖಿತ ಅಭಿಮತ ಸ್ವೀಕೃತವಾಗದಿದ್ದಲ್ಲಿ, ಒಂದು ದಿನದ ವೇತನವನ್ನು ಕಟಾವು ಮಾಡಲು ನೌಕರರ ಆಕ್ಷೇಪಣೆ ಇರುವುದಿಲ್ಲವೆಂದು ಭಾವಿಸಿ ಕ್ರಮವಹಿಸುವುದು.

(ಇ) ಪ್ರತಿಯೊಬ್ಬ ನೌಕರನ/ಳ ಸಂಬಳದಿಂದ ಕಟಾವು ಮಾಡಿದ ವೇತನದ ಅಂಶವನ್ನು ವೇತನ ಬಿಲ್ಲಿನಲ್ಲಿ ಅವರ ಹೆಸರಿನ ಎದುರಿನಲ್ಲಿ **"8658-00-102-4-32: State Government Employees Contribution towards Chief Minister Relief Fund COVID-19)"** ಲೆಕ್ಕ ಶೀರ್ಷಿಕೆಗೆ ಎಂಬ ಪ್ರತ್ಯೇಕ ಕಾಲಮ್ಮಿನಲ್ಲಿ ತೋರಿಸುವುದು ಮತ್ತು ಸಮಗ್ರ ವೇತನ ಬಿಲ್ಲಿನಲ್ಲಿ ಮುರಿದುಕೊಂಡ ಒಟ್ಟು ಮೊತ್ತವನ್ನು ವೇತನ ಬಿಲ್ಲಿನ ಮುಖ ಪುಟದಲ್ಲಿ **"State Government Employees Contribution towards Chief Minister Relief Fund to combat COVID-19)"** ಲೆಕ್ಕ ಶೀರ್ಷಿಕೆಗೆ ಎಂದು ಸ್ಪಷ್ಟವಾಗಿ ನಮೂದಿಸಬೇಕು. ಖಜಾನೆ ಅಧಿಕಾರಿಯು ಒಟ್ಟು ಮೊತ್ತವನ್ನು ಈ ಶೀರ್ಷಿಕೆಗೆ ಜಮಾ ಮಾಡುವ ಮೂಲಕ ಬಿಲ್ಲನ್ನು ಪಾವತಿ ಮಾಡಬೇಕು. ವೇತನವನ್ನು ಬಟವಾಡೆ ಮಾಡಲು ನಿವ್ವಳ ಮೊತ್ತಕ್ಕೆ ಚೆಕ್ಕನ್ನು ಬಟವಾಡೆ ಅಧಿಕಾರಿಗೆ ಅವರು ನೀಡುವರು.

(ಈ) **ಮುಖ್ಯಮಂತ್ರಿಗಳ ಪರಿಹಾರನಿಧಿ ಕೋವಿಡ್-19ಗೆ ವೇತನ ಬಿಲ್ಲುಗಳಿಂದ ಕಟಾವು ಮಾಡಲಾದ ಮೊತ್ತವನ್ನು "8658-00-102-4-32: Government Employees contribution to combat COVID-19" ಗೆ ಎಂಬ ಲೆಕ್ಕಶೀರ್ಷಿಕೆಗೆ ಖಜಾನೆಯು ಜಮಾ ಮಾಡುವುದು.** ಅಮಾನತ್ತು ಲೆಕ್ಕ ಶೀರ್ಷಿಕೆಗೆ ಮಾಡುವ ಹೊಂದಾಣಿಕೆಯು, ಕರ್ನಾಟಕ ಖಜಾನೆ ಸಂಹಿತೆಯ ಅನುಚ್ಛೇದ 107 ಮತ್ತು ಇದೇ ಸಂಹಿತೆಯಲ್ಲಿ ನಿಗಧಿಪಡಿಸಿದ 13 ಮತ್ತು 14ನೇ ಸಂಖ್ಯೆಯ ನಮೂನೆಯ ಪ್ರಕಾರ ವರ್ಗಾವಣೆಯ ಮೂಲಕ ಮಾಡತಕ್ಕದ್ದು.

(ಉ) ರಾಜ್ಯ ಸರ್ಕಾರಿ ನೌಕರರ ವೇತನದಿಂದ ಕಟಾವು ಮಾಡಿ ಲೆಕ್ಕ ಶೀರ್ಷಿಕೆ **"8658-00-102-4-32: Government Employees contribution to combat COVID-19" ಗೆ ಜಮೆ ಮಾಡಲಾದ ಕ್ರೋಢೀಕೃತ ಮೊತ್ತವನ್ನು ಲೆಕ್ಕ ಶೀರ್ಷಿಕೆ "8449-00-120-9-**

**62: Fund to combat COVID-19" ಗೆ ವರ್ಗಾವಣೆ ಮೂಲಕ ಜಮೆ ಮಾಡತಕ್ಕದ್ದು. ಹೀಗೆ ಜಮೆ ಮಾಡಲಾದ ಮೊತ್ತವನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ದ ವಿಧಾನ ಸೌಧ ಶಾಖೆಯ, ಮುಖ್ಯಮಂತ್ರಿಗಳ ಪರಿಹಾರನಿಧಿ ಕೋವಿಡ್-19, ಖಾತೆ ಸಂಖ್ಯೆ: 39234923151, IFSC Code:SBIN0040277, Swift Code: SBININBB171 ಗೆ ಚೆಕ್ ಮುಖಾಂತರ ಜಮೆ ಮಾಡುವುದು.**

(ಊ) ಉಪಖಜಾನೆಗಳು ಮುರಿದುಕೊಂಡ ಮೊತ್ತದ ಬಗ್ಗೆ ಒಂದು ಪಟ್ಟಿಯನ್ನು ಜಿಲ್ಲಾ ಖಜಾನೆಗಳಿಗೆ ಕಳುಹಿಸುವುದು ಮತ್ತು ಜಿಲ್ಲಾ ಖಜಾನೆಗಳು ಅಮಾನತ್ತು ಲೆಕ್ಕಶೀರ್ಷಿಕೆ **"8658-00-102-4-32: Government Employees contribution to combat COVID-19" ಗೆ ಜಮೆ ಮಾಡಲಾದ ಕ್ರೋಢೀಕೃತ ಮೊತ್ತವನ್ನು ಲೆಕ್ಕ ಶೀರ್ಷಿಕೆ "8449-00-120-9-62: Fund to combat COVID-19" ಗೆ ವರ್ಗಾವಣೆ ಮೂಲಕ ಜಮೆ ಮಾಡುವುದು.** ಹೀಗೆ ಜಮೆ ಮಾಡಲಾದ ಕ್ರೋಢೀಕೃತ ಮೊತ್ತವನ್ನು **ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ), ಮುಖ್ಯಮಂತ್ರಿಗಳ ಪರಿಹಾರನಿಧಿ ಕೋವಿಡ್-19** ಖಾತೆಗೆ ಆನ್‌ಲೈನ್ ಮುಖಾಂತರ ವರ್ಗಾಯಿಸಲು ಅಥವಾ ಚೆಕ್ಕುಗಳ ಮೂಲಕ ಪಾವತಿಸಲು ಅವಶ್ಯಕ ಕ್ರಮಗಳನ್ನು ತೆಗೆದುಕೊಳ್ಳುವುದು. ಹೀಗೆ ಕೈಗೊಂಡ ಕ್ರಮದ ಮಾಹಿತಿಯನ್ನು ಮಾನ್ಯ ಮುಖ್ಯ ಮಂತ್ರಿಯವರ ಜಂಟಿಕಾರ್ಯದರ್ಶಿ(ಪರಿಹಾರನಿಧಿ),ಕೊಠಡಿ ಸಂ:235 'ಎ', ವಿಧಾನಸೌಧ, ಬೆಂಗಳೂರು ಇವರಿಗೆ ಕಳುಹಿಸುವುದು.

(ಋ) ನೌಕರರ ವೇತನವನ್ನು ಹೆಚ್‌ಆರ್‌ಎಂಎಸ್ ತಂತ್ರಾಂಶ ಪದ್ಧತಿಯ ಮೂಲಕ ಪಾವತಿಸದ ಪ್ರಕರಣಗಳಲ್ಲಿಯೂ ಸಹ ಈ ಮೇಲಿನ ವಿಧಾನವನ್ನೇ ಅನುಸರಿಸತಕ್ಕದ್ದು. ಇಂತಹ ಪ್ರಕರಣಗಳಲ್ಲಿ ಜಿಲ್ಲಾ ಖಜಾನೆಗಳು ಅಮಾನತ್ತು ಲೆಕ್ಕ ಶೀರ್ಷಿಕೆಗೆ ಖರ್ಚು ಹಾಕುವುದರ ಮೂಲಕ **ಮುಖ್ಯಮಂತ್ರಿಗಳ ಪರಿಹಾರನಿಧಿ ಕೋವಿಡ್-19** ಖಾತೆಗೆ ಅಮಾನತ್ತು ಲೆಕ್ಕ ಶೀರ್ಷಿಕೆಗೆ ಜಮಾ ಮಾಡಿದ ಮೊತ್ತಕ್ಕೆ ಒಂದು ಸಂಚಿತ ಚೆಕ್ಕನ್ನು ನೀಡುವುದು ಮತ್ತು ಆ ಚೆಕ್ಕುಗಳನ್ನು **ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ), ವಿಧಾನ ಸೌಧ ಶಾಖೆಯ ಮುಖ್ಯಮಂತ್ರಿಗಳ ಪರಿಹಾರನಿಧಿ ಕೋವಿಡ್-19 ಖಾತೆ ಸಂಖ್ಯೆ: 39234923151ಗೆ** ಜಮಾ ಮಾಡಲು ಮುಖ್ಯ ಮಂತ್ರಿಯವರ ಜಂಟಿಕಾರ್ಯದರ್ಶಿ(ಪರಿಹಾರನಿಧಿ), ಕೊಠಡಿ ಸಂ:235 'ಎ', ವಿಧಾನಸೌಧ, ಬೆಂಗಳೂರು –560001 ಇಲ್ಲಿಗೆ ಕಳುಹಿಸುವುದು.

(ಎ) 2020ರ ಏಪ್ರಿಲ್ ಮಾಹೆಯಲ್ಲಿ ಸ್ವೀಕರಿಸಲಾದ ವೇತನ ಬಿಲ್ಲುಗಳ ನಿರ್ವಹಣೆಗಳನ್ನು 2020ರ ಜುಲೈ 10ನೇ ದಿನಾಂಕದೊಳಗೆ ಪೂರೈಸಬೇಕು. 31.07.2020ರ ನಂತರ ಪಾವತಿ ಮಾಡಿದ ಬಿಲ್ಲುಗಳ ಪ್ರಕರಣಗಳಲ್ಲಿ ಅವುಗಳನ್ನು ಪಾವತಿ ಮಾಡಿದ ಒಂದು ವಾರದ ಒಳಗೆ ಮುಖ್ಯ ಮಂತ್ರಿಯವರ ಜಂಟಿಕಾರ್ಯದರ್ಶಿ(ಪರಿಹಾರನಿಧಿ), ಕೊಠಡಿ ಸಂ:235'ಎ', ವಿಧಾನಸೌಧ, ಬೆಂಗಳೂರು –560001 ಇವರಿಗೆ ಚೆಕ್ಕುಗಳನ್ನು ಕಳುಹಿಸಬೇಕು. ಎಲ್ಲಾ ಜಿಲ್ಲಾ ಖಜಾನೆಗಳು ಮತ್ತು ಬೆಂಗಳೂರಿನ ರಾಜ್ಯ ಹುಜೂರ್ ಖಜಾನೆಯು ನೀಡಿದ ಚೆಕ್ಕುಗಳು/ಅನ್‌ಲೈನ್ ಪಾವತಿ ದಾಖಲೆಗಳ ಒಂದು ಪ್ರತಿಯನ್ನು

ಮುಖ್ಯಮಂತ್ರಿಗಳ ಜಂಟಿ ಕಾರ್ಯದರ್ಶಿಯವರಿಗೆ ಜಮೆಗಳ ಲೆಕ್ಕ ಹೊಂದಾಣಿಕೆಯ ಉದ್ದೇಶಕ್ಕಾಗಿ ಕಳುಹಿಸಬೇಕು ಹಾಗೂ ಇದರ ಒಂದು ಪ್ರತಿಯನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು ಇವರಿಗೆ ಕಳುಹಿಸುವುದು.

(ಏ) ಬೆಂಗಳೂರಿನ ರಾಜ್ಯ ಹುಜೂರ್ ಖಜಾನೆಯಲ್ಲಿ ಸ್ವೀಕರಿಸಲ್ಪಡುವ ವೇತನ ಬಿಲ್ಲುಗಳ ಮೇಲೂ ಸಹ ಈ ಮೇಲಿನ ಕ್ರಮಗಳನ್ನು ಪಾಲಿಸುವುದು.

(ಐ) ಕರ್ನಾಟಕ ರಾಜ್ಯದಲ್ಲಿ ಕೊರೊನ ವೈರಸ್ ಸೋಕು ಖಾಯಿಲೆಯ ನಿಯಂತ್ರಣಕ್ಕೆ ನೀಡಲ್ಪಡುವ ಸರ್ಕಾರಿ ನೌಕರರ ಒಂದು ದಿನದ ವೇತನ ದೇಣಿಗೆಯನ್ನು ಕಟಾವು ಮಾಡಿ ಈ ಮೇಲಿನ ಲೆಕ್ಕ ಶೀರ್ಷಿಕೆಗಳಿಗೆ ಜಮೆ ಮಾಡಿ ಅದನ್ನು **ಮುಖ್ಯಮಂತ್ರಿಗಳ ಪರಿಹಾರನಿಧಿ ಕೋವಿಡ್-19 ಖಾತೆಗೆ** ಪಾವತಿಸುವ ಪ್ರಕ್ರಿಯೆಯ ಮೇಲುಸ್ತುವಾರಿಗಾಗಿ ಖಜಾನೆ ನಿರ್ದೇಶಕರು ನೇಮಿಸುವ ನೋಡಲ್ ಅಧಿಕಾರಿಯು ಈ ಪ್ರಕ್ರಿಯೆಯ ಸಂಪೂರ್ಣ ಮೇಲುಸ್ತುವಾರಿಯನ್ನು ನಿರ್ವಹಿಸತಕ್ಕದ್ದು. ಈ ಮೇಲಿನ ಯೋಜನೆಯ ಅನುಷ್ಠಾನದಲ್ಲಿ ತೊಡಕುಗಳುಂಟಾದಲ್ಲಿ ಸಕ್ಷಮ ಪ್ರಾಧಿಕಾರಿಯೊಂದಿಗೆ ಸಮಾಲೋಚಿಸಿ ಅದನ್ನು ಸರಿಪಡಿಸುವ ಜವಾಬ್ದಾರಿಯನ್ನು ನೋಡಲ್ ಅಧಿಕಾರಿಯವರು ಹೊಂದಿರುತ್ತಾರೆ.

2. ಮಾರ್ಚ್ 2020ರ ವೇತನ ಎಂದರೆ, ಸರ್ಕಾರಿ ನೌಕರನಿಗೆ ಪ್ರಸ್ತುತ 31.03.2020 ರಂದು ಲಭ್ಯವಿರುವ ವೇತನ ಎಂದು ಪರಿಗಣಿಸತಕ್ಕದ್ದು. ಪರಂತು, ತದನಂತರದಲ್ಲಿ ಹೊರಡಿಸುವ ಯಾವುದೇ ಆದೇಶಗಳ ಪ್ರಕಾರ ಹೆಚ್ಚಳವಾಗುವ ವೇತನವನ್ನು ಪರಿಗಣಿಸತಕ್ಕದ್ದಲ್ಲ.

3. ಮಹಾಲೇಖಪಾಲರು ನೀಡಿದ ಅಧಿಕಾರ ಪತ್ರದ ಮೇಲೆ ತಮ್ಮ ವೇತನವನ್ನು ಖಜಾನೆಗಳಿಂದ ಪಡೆಯುವ ಅಧಿಕಾರಿಗಳೂ ಸಹ ಮೇಲಿನ ಕ್ರಮವನ್ನು ಪಾಲಿಸುವುದು.

4. ಐ.ಆರ್.ಎಲ್.ಎ. ಪದ್ಧತಿಗೆ ಒಳಪಡುವ ಅಧಿಕಾರಿಗಳ ಪ್ರಕರಣಗಳಲ್ಲಿ ವೇತನ ಚೆಕ್ಕುಗಳನ್ನು ನೀಡುವ ಪ್ರಾಧಿಕಾರಿಗಳು ಚೆಕ್ಕುಗಳನ್ನು ನೀಡುವ ಸಮಯದಲ್ಲಿ ಕೊಡುಗೆ ಅಂಶವನ್ನು ಮುರಿದುಕೊಳ್ಳುವುದು ಮತ್ತು ಮುರಿದುಕೊಂಡ ಅಂಶದ ಅವಶ್ಯಕ ಹೊಂದಾಣಿಕೆಯನ್ನು ಮಾಡುವುದು. ಹಾಗೂ ಈ ಬಗ್ಗೆ ಮಾಹಿತಿಯನ್ನು ಮುಖ್ಯಮಂತ್ರಿಯವರ ಜಂಟಿ ಕಾರ್ಯದರ್ಶಿ(ಪರಿಹಾರ ನಿಧಿ) ಹಾಗೂ ಖಜಾನೆ ಅಧಿಕಾರಿಯವರು ನೇಮಿಸುವ ನೋಡಲ್ ಅಧಿಕಾರಿಗೆ ನೀಡುವುದು.

5. ಸ್ಥಳೀಯ ಸಂಸ್ಥೆಗಳು ಮತ್ತು ವಿಶ್ವ ವಿದ್ಯಾಲಯಗಳೂ ಸೇರಿದಂತೆ ಅನುದಾನ ಪಡೆಯುವ ಇತರ ಸಂಸ್ಥೆಗಳು ತಮ್ಮ ಅಧೀನದಲ್ಲಿ ಕೆಲಸ ಮಾಡುವ ನೌಕರರ ಸಂಬಂಧದಲ್ಲಿಯೂ ಸಹ ಈ ಮೇಲಿನ ರೀತಿಯ ಕ್ರಮವನ್ನು ಅನುಸರಿಸತಕ್ಕದ್ದು. ತಮ್ಮ ಕೊಡುಗೆಯನ್ನು ಸೂಚಿಸುವ ಚೆಕ್ಕುಗಳನ್ನು **ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ವಿಧಾನ ಸೌಧ ಶಾಖೆಯ ಮುಖ್ಯಮಂತ್ರಿಗಳ ಪರಿಹಾರನಿಧಿ ಕೋವಿಡ್-19 ಖಾತೆ ಸಂಖ್ಯೆ:39234923151ಗೆ** ಜಮಾ ಮಾಡಲು ಮಾನ್ಯ ಮುಖ್ಯಮಂತ್ರಿಯವರ ಜಂಟಿ ಕಾರ್ಯದರ್ಶಿಯವರಿಗೆ ಕಳುಹಿಸುವುದು.

6. ಈಗಾಗಲೇ ಮಾರ್ಚ್ ತಿಂಗಳ ವೇತನ ಪಾವತಿಸಿರುವಂತಹ ನೌಕರರ ಪ್ರಕರಣಗಳಲ್ಲಿ ಒಂದು ದಿನದ ವಂತಿಗೆಯನ್ನು 2020ರ ಏಪ್ರಿಲ್ ತಿಂಗಳಿನ ವೇತನದಲ್ಲಿ ಈ ಮೇಲಿನ ಕ್ರಮದಂತೆ ಕಟಾವು ಮಾಡಿ ಜಮೆ ಮಾಡಲು ಕ್ರಮವಹಿಸುವುದು.

7. ಈ ಆದೇಶದನ್ವಯ ಕಟಾವು ಮಾಡಿ ಪ್ರಕೃತಿ ವಿಕೋಪ ಪರಿಹಾರಕ್ಕಾಗಿ ಸಾರ್ವಜನಿಕ ವಂತಿಕೆ ನಿಧಿಗೆ ಸಂದಾಯವಾಗುವ ಮೊತ್ತವು ಆದಾಯ ತೆರಿಗೆಯ ಅಧಿನಿಯಮದ ಪ್ರಕರಣ **80(G)** ಯಡಿ ಶೇಕಡ 100ರಷ್ಟು ಆದಾಯ ತೆರಿಗೆಯಿಂದ ವಿನಾಯಿತಿಗೆ ಒಳಪಡುತ್ತದೆಂದೂ, ಅದರಂತೆ, ಸರ್ಕಾರಿ ನೌಕರರು ಪ್ರಕೃತಿ ವಿಕೋಪ ಪರಿಹಾರಕ್ಕಾಗಿ ಸಾರ್ವಜನಿಕ ವಂತಿಕೆ ನಿಧಿಗೆ ಸಂದಾಯ ಮಾಡುವ ಮೊತ್ತಕ್ಕೆ ಶೇಕಡಾ 100ರಷ್ಟು ತೆರಿಗೆ ವಿನಾಯತಿಯನ್ನು ಪಡೆಯಲು ಅರ್ಹರಿರುತ್ತಾರೆಂದು ತಿಳಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಡಿ.ಎಸ್.ಜೋಗೋಜೆ)
ಸರ್ಕಾರದ ಉಪ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಸೇವೆಗಳು-2).

BM 01/04/2020

ಗೆ:

ಸಂಕಲನಕಾರರು, ಕರ್ನಾಟಕ ಗೆಜೆಟ್, ಮುಂದಿನ ಪ್ರಕಟಣೆಯಲ್ಲಿ ಪ್ರಕಟಿಸುವುದಕ್ಕಾಗಿ ಹಾಗೂ 25 ಪ್ರತಿಗಳನ್ನು ಆರ್ಥಿಕ ಇಲಾಖೆಗೆ ಸರಬರಾಜು ಮಾಡಲು.

**ಇವರಿಗೆ:**

1. ಸರ್ಕಾರದ ಮುಖ್ಯ ಕಾರ್ಯದರ್ಶಿ/ಅಪರ ಮುಖ್ಯ ಕಾರ್ಯದರ್ಶಿಗಳು.
2. ಪ್ರಧಾನ ಮಹಾಲೇಖಪಾಲರು(G&SSA), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, (ಪಿ.ಬಿ.ನಂ.5398) ಬೆಂಗಳೂರು.
3. ಪ್ರಧಾನ ಮಹಾಲೇಖಪಾಲರು(E&RSA), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, (ಪಿ.ಬಿ.ನಂ.5398) ಬೆಂಗಳೂರು.
4. ಪ್ರಧಾನ ಮಹಾಲೇಖಪಾಲರು (ಲೆಕ್ಕಗಳು ಮತ್ತು ಹಕ್ಕುಗಳು), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, (ಪಿ.ಬಿ. ನಂ.5329) ಬೆಂಗಳೂರು.
5. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು.
6. ಮುಖ್ಯ ಮಂತ್ರಿಯವರ ಜಂಟಿ ಕಾರ್ಯದರ್ಶಿ (ಪರಿಹಾರನಿಧಿ), ಕೊಠಡಿ ಸಂ: 235'ಎ' ವಿಧಾನಸೌಧ, ಬೆಂಗಳೂರು-1
7. ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.
8. ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬಹುಮಹಡಿ ಕಟ್ಟಡ, ಬೆಂಗಳೂರು.
9. ರಿಜಿಸ್ಟ್ರಾರ್, ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ, ಕಂದಾಯ ಭವನ, ಬೆಂಗಳೂರು.
10. ಎಲ್ಲಾ ಪ್ರಾದೇಶಿಕ ಆಯುಕ್ತರು.

11. ಕಾರ್ಯದರ್ಶಿ, ಕರ್ನಾಟಕ ಲೋಕ ಸೇವಾ ಆಯೋಗ, ಬೆಂಗಳೂರು.
12. ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ/ವಿಧಾನ ಪರಿಷತ್ತು, ವಿಧಾನಸೌಧ, ಬೆಂಗಳೂರು.
13. ಕಾರ್ಯದರ್ಶಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ವಿಧಾನಸೌಧ, ಬೆಂಗಳೂರು.
14. ಕರ್ನಾಟಕ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳ ಉಪ ಕುಲಪತಿಗಳು/ರಿಜಿಸ್ಟ್ರಾರ್‌ಗಳು.
15. ಎಲ್ಲಾ ಜಿಲ್ಲೆಗಳ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು.
16. ಎಲ್ಲಾ ಇಲಾಖಾ ಮುಖ್ಯಸ್ಥರು/ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
17. ಎಲ್ಲಾ ಜಿಲ್ಲೆಗಳ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
18. ಖಜಾನೆ ಅಧಿಕಾರಿ, ರಾಜ್ಯ ಹುಜೂರು ಖಜಾನೆ/ಜಿಲ್ಲಾ ಖಜಾನೆಗಳು.
19. ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ವಿಕಾಸ ಸೌಧ, ಬೆಂಗಳೂರು.
20. ಪ್ರಾಜೆಕ್ಟ್ ಆಫೀಸರ್, ಹೆಚ್.ಆರ್.ಎಂ.ಎಸ್., ಕೊಠಡಿ ಸಂಖ್ಯೆ:145'A', ಬಹುಮಹಡಿಗಳ ಕಟ್ಟಡ, ಬೆಂಗಳೂರು.
21. ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಕಬ್ಬನ್ ಉದ್ಯಾನವನ, ಬೆಂಗಳೂರು.
22. ಸರ್ಕಾರದ ಅಧೀನ ಕಾರ್ಯದರ್ಶಿ, ಸಿ.ಆ.ಸು.ಇಲಾಖೆ (ಲೆಕ್ಕಪತ್ರ/ಐ.ಆರ್.ಎಲ್.ಎ.), ಬೆಂಗಳೂರು.
23. ಕರ್ನಾಟಕ ಸರ್ಕಾರ ಸಚಿವಾಲಯದ ಎಲ್ಲಾ ಶಾಖೆಗಳು.
24. ಕರ್ನಾಟಕ ಸರ್ಕಾರ ಸಚಿವಾಲಯದ ಗ್ರಂಥಾಲಯ/ವಿಧಾನ ಮಂಡಲದ ಗ್ರಂಥಾಲಯ.
25. ವಾರಪತ್ರ/ಶಾಖೆಯ ರಕ್ಷಾ ಕಡತ.

**ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಅಧಿಕೃತ ಅಂತರ್ಜಾಲತಾಣ www.finance.karnataka.gov.in ವೀಕ್ಷಿಸಿ.**